ಹುಳಿಯೂರಿನಲ್ಲಿ ಉದ್ದೇಶಿಸಿರುವ ಉಪವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು 1992-93ರ ಸಾಲಿನಲ್ಲಿ ಪ್ರಾರಂಭಿಸಿ, 1993, 94ರ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿರುವುದು

194 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿ ಕೃಷಿಕರಿಗೆ, ಕಾರ್ಖಾನೆಗಳಿಗೆ ಮತ್ತು ಗ್ರಾಮಗಳಲ್ಲಿನ ಬೆಳಕಿಗೆ ತೀವ್ರ ತೊಂದರೆಯಾಗಿ ರಾಜ್ಯದ ಪ್ರಗತಿಗೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ತೊಂದರೆಯನ್ನು ಶಾಶ್ವತವಾಗಿ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಇ) *ಇದಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಬಂದಿದೆ. ಇದಕ್ಕೆ ಕಾರಣ ಲಭ್ಯತೆಯಿರುವ ವಿದ್ಯುಚ್ಛಕ್ತಿಗಿಂತ ಬೇಡಿಕೆ ಅಗಾಧವಾಗಿರುವುದರಿಂದ ಲೋಡ್ ಶೆಡ್ಡಿಂಗ್ ಮತ್ತು ಪವರ್ ಕಟ್‌ನ್ನು ಅನಿವಾರ್ಯವಾಗಿ ಜಾರಿಗೊಳಿಸಲಾಗಿದೆ.

ಆ) ಈ ತೊಂದರೆಯನ್ನು ನಿವಾರಿಸಲು ಮಂಡಳಿಯು ಪ್ರತಿ ವರ್ಷವೂ ಹೊಸ ವಿದ್ಯುತ್ ಪ್ರವರ್ಧಣಾ ಮಾರ್ಗಗಳನ್ನು ನಿರ್ಮಾಣ ಮಾಡುತ್ತಿದೆ ಮತ್ತು ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸುತ್ತಿದೆ. ಈ ಕಾರ್ಯಗಳಿಂದಾಗಿ, ವಿಶ್ವಬ್ಯಾಂಕಿನಿಂದ, ಏಷ್ಯಾನ್ ಅಭಿವೃದ್ಧಿ ಬ್ಯಾಂಕ್ ಮತ್ತು ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಆರ್ಥಿಕ ನೆರವು ಪಡೆಯುತ್ತಿದೆ.

ಇ) 'ಅ'ನಲ್ಲಿ ತಿಳಿಸಿರುವ ಕಾಮಗಾರಿಗಳಿಗೆ ಬೇಕಾಗುವ ಹಣದ ಮೊತ್ತ ಅಗಾಧವಾಗಿರುವುದರಿಂದ ಅವಶ್ಯಕತೆ ಮತ್ತು ಆದ್ಯತೆಗಳನ್ನು ಗಮನಿಸಿ ಹಂತ ಹಂತವಾಗಿ ನಿರ್ಮಾಣ ಕಾರ್ಯವನ್ನು ಮಾಡಲಾಗುವುದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆದಾಯ

204 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಿಜಾಪುರ ವಿಭಾಗವನ್ನು ಕಡೆಗಾಣಿಸಿದ್ದರು ಅದು ಮಿಕ್ಕ ಎಲ್ಲಾ ವಿಭಾಗಗಳಿಗಿಂತ ಹೆಚ್ಚಿನ ಆದಾಯ ಗಳಿಸುವುದು ನಿಜವೇ?*

ಆ) *ಈ ವಿಭಾಗಕ್ಕೆ ಹೆಚ್ಚಿನ ವಾಹನ ಚಾಲಕ ಮತ್ತು ನಿರ್ವಾಹಕರನ್ನು ನೀಡದಿರುವುದಕ್ಕೆ ಕಾರಣಗಳೇನು?*

ಇ) *ವಿಜಾಪುರ ವಿಭಾಗವು ರಾಜ್ಯದಲ್ಲಿ ಅತಿ ವಿಶಾಲವಾದ ಜಿಲ್ಲೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ವಾಹನಗಳ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸಲು ಸರ್ಕಾರದವರು ಹೆಚ್ಚಿನ ವಾಹನ ಚಾಲಕ, ಚಾಲಕ ಮತ್ತು ನಿರ್ವಾಹಕರನ್ನು ಒದಗಿಸಲು ಕೈಗೊಂಡಿರುವ ಕ್ರಮಗಳೇನು?*